# ವಾರ್ತಾ ವಿಶ್ಲೇಷಣೆ

## ಭವಿಷ್ಯದ ಯುಗವು ದಾನದ ಯುಗವೇ?

ಊಹಿಸಿ ನೋಡಿ – ಜಗತ್ತಿನ ಅತ್ಯಂತ ಶ್ರೀಮಂತ ವ್ಯಕ್ತಿ ನಡೆಸುತ್ತಿರುವ ಒಂದು ಟ್ರಸ್ಟಿಗೆ ಜಗತ್ತಿನ ಎರಡನೆಯ ಅತ್ಯಂತ ಶ್ರೀಮಂತ ವ್ಯಕ್ತಿ ತನ್ನ ದೇಣಿಗೆಯನ್ನು ಕೊಡುತ್ತಿದ್ದಾನೆ. ಇದು ಇತ್ತೀಚಿಗೆ ನಡೆದ ಸತ್ಯ ಘಟನೆ. ಪ್ರಪಂಚದ ಅತ್ಯಂತ ಶ್ರೀಮಂತ ವ್ಯಕ್ತಿ ಬಿಲ್ ಗೇಟ್ಸ್ ಸ್ಥಾಪಿಸಿರುವ ಟ್ರಸ್ಟಿನಲ್ಲಿ ಈಗಾಗಲೇ ಇರುವ ಹಣದ ಮೊತ್ತ ೨೯ ಬಿಲಿಯನ್ ಡಾಲರುಗಳು! ಜಾಗತಿಕವಾಗಿ ಎರಡನೆಯ ಅತಿ ದೊಡ್ಡ ಶ್ರೀಮಂತನಾದ ವಾರೆನ್ ಬುಫೆಟ್ ಅದಕ್ಕೆ ಕೊಡುಗೆಯಾಗಿ ನೀಡಿದ್ದು ಎಷ್ಟು ಗೊತ್ತೆ? ೩೧ ಬಿಲಿಯನ್ ಡಾಲರುಗಳು!!

**ಹಿಂದೂ** ಪತ್ರಿಕೆಯಲ್ಲಿ ಈ ಬೃಹತ್ ಕೊಡುಗೆಯ ಸ್ವಾರಸ್ಯಕರ ವಿಶ್ಲೇಷಣೆ ಇತ್ತೀಚಿಗೆ ಪ್ರಕಟವಾಯಿತು. ಅದರ ಪ್ರಕಾರ, ೧೯ನೆಯ ಶತಮಾನ ಬಂಡವಾಳಶಾಹಿಯ ಯುಗವಾದರೆ, ೨೦ನೆಯ ಶತಮಾನ ಸಮಾಜವಾದದ ಯುಗ. ೨೧ನೆಯ ಶತಮಾನ ಎಂತಹ ಯುಗ? **ದಾನದ ಯುಗ!** ಎನ್ನುತ್ತದೆ ಮೇಲಿನ ವಿಶ್ಲೇಷಣೆ. ಹಿಂದಿನ ಕಾಲದಲ್ಲಿ ಹಣ ಗಳಿಸುವುದು ಪ್ರಯಾಸದ ಕೆಲಸವಾಗಿತ್ತು. ಈಗ ಬುದ್ಧಿವಂತನಾದವನು ತನ್ನ ೩೦ನೆಯ ವಯಸ್ಸಿನೊಳಗಾಗಿ ಅಗಾಧವಾದ ಸಂಪತ್ತನ್ನೇ ಗಳಿಸುತ್ತಾನೆ. ಮುಂದೆ? ಅದನ್ನು ಖರ್ಚುಮಾಡುವುದೇ ಈಗ ಕಷ್ಟದ ಕೆಲಸವಾಗಿದೆ. ತುಂಬಿ ಹರಿಯುತ್ತಿರುವ ಲಾಭದ ಹೊಳೆಯಲ್ಲಿ ಎಷ್ಟನ್ನು ತಾನೆ ಬ್ಯಾಂಕಿನಲ್ಲಿ ಇಡುವುದು? ಉಳಿದುದನ್ನು ಹೇಗೆ ತಾನೇ ಖರ್ಚು ಮಾಡುವುದು? ಇದಕ್ಕೆಲ್ಲ ಅಂತಿಮ ಪರಿಹಾರವಾಗಿದೆ – "**ದಾನ ಮಾಡುವುದು**".

ದಾನವನ್ನು ಸತ್ಪಾತ್ರರಿಗೆ ನೀಡಬೇಕು ಅಲ್ಲವೆ? ಸರ್ಕಾರ ನಡೆಸುತ್ತಿರುವ ಸೇವಾಕಾರ್ಯಗಳಿಗೆ ಕೊಟ್ಟರೆ ಅದು ಪೋಲಾದಂತೆಯೇ! ಅದಕ್ಕಾಗಿ ಆರೋಗ್ಯ ಪಾಲನೆ, ಪೌಷ್ಟಿಕ ಆಹಾರ – ಈ ಕ್ಷೇತ್ರಗಳಲ್ಲಿ ಹಣತೊಡಗಿಸಿ, ಬಡದೇಶಗಳಲ್ಲಿ ಅದರ ಮೂಲಕ ಬಡತನ ನಿರ್ಮೂಲನಾ ಕಾರ್ಯವನ್ನು ಸುವ್ಯವಸ್ಥಿತವಾಗಿ ನಡೆಸುತ್ತಿರುವ **ಗೇಟ್ಸ್ ಫೌಂಡೇಶನ್** ಸಂಸ್ಥೆಯನ್ನು ದಾನಕ್ಕೆ ಯೋಗ್ಯವೆಂದು ಪರಿಗಣಿಸಿ, ವಾರೆನ್ ಬುಫೆಟ್ ಅದಕ್ಕೇ ಹಣ ಕೊಡುತ್ತಿದ್ದಾನಂತೆ.

ಹೀಗೆ ಹಣ ಉಳ್ಳವರಿಗೆ ಅದನ್ನು ದಾನವಾಗಿ ಕೊಡುವುದು ಈಗ ಪ್ರತಿಷ್ಠೆಯ ವಿಷಯವಾಗಿದೆ. ಈ ಕಾಲದ ಅತ್ಯಂತ ಪ್ರಭಾವಿ ಉದ್ಯಮಗಳಾದ ಬ್ಯಾಂಕಿಂಗ್ ಮತ್ತು ಇಂಟರ್‌ನೆಟ್‌ಗಳಿಂದ ಭಾರೀ ಶ್ರೀಮಂತರಾದವರು ತಮ್ಮ ಆತ್ಮಸಾಕ್ಷಿಯನ್ನು ಕಳೆದುಕೊಂಡಿಲ್ಲ ಎನ್ನುವುದನ್ನು ಈ ಹೊಸ ಬೆಳವಣಿಗೆ ಎತ್ತಿ ತೋರಿಸುತ್ತದೆ. ಇಂತಹವರು ವ್ಯವಸ್ಥಿತ ರೀತಿಯಲ್ಲಿ, ತಾವು ಹಣ ಸಂಪಾದಿಸಿದಷ್ಟೇ ಜಾಗರೂಕತೆಯಿಂದ ಅದರ ವಿನಿಯೋಗವನ್ನೂ ಮಾಡುತ್ತಾರೆ ಎನ್ನುವುದು ಗಮನಿಸಬೇಕಾದ ವಿಷಯ.

ಈ ಎಲ್ಲ ದಾನ ನೀಡುವಿಕೆಯ ಉದ್ದೇಶ ಉದಾತ್ತವಾದುದು ಎಂಬುದನ್ನು ಯಾರೂ ಅಲ್ಲಗಳೆಯರು. ಆದರೆ ಇಷ್ಟರಿಂದಲೇ ಜೀವನ ಸಾರ್ಥಕವಾಗುತ್ತದೆಯೇ? **ಉಳ್ಳವರು ಶಿವಾಲಯವ ಮಾಡುವರು ನಾನೇನ ಮಾಡುವೆ, ಬಡವನಯ್ಯ** ಎಂದ ಬಸವಣ್ಣನವರು ತಮ್ಮ ದೇಹವನ್ನೇ ದೇಗುಲವನ್ನಾಗಿ ಮಾಡಿಕೊಂಡರು. ಅದಕ್ಕೆ ಕಾರಣ, ಅವರೇ ಹೇಳುವಂತೆ **ಸ್ಥಾವರಕ್ಕೆ ಅಳಿವುಂಟು, ಜಂಗಮಕ್ಕೆ ಅಳಿವಿಲ್ಲ.** ಆದ್ದರಿಂದ, ಶಾಶ್ವತವಾದ ಆಧ್ಯಾತ್ಮಿಕ ಮತ್ತು ನೈತಿಕ ಮೌಲ್ಯಗಳು ಈ ಎಲ್ಲ ದಾನಗಳ ಮೂಲ ಪ್ರೇರಣೆಯಾಗಬೇಕು. ಆಗ ಅದು **ಸೇವೆಯಾಗುತ್ತದೆ.** ಬದುಕಿಗೆ ಸಂತೃಪ್ತಿಯನ್ನು ಕೊಡುತ್ತದೆ. ಇಲ್ಲದಿದ್ದರೆ **ದಾನವೆಂಬುದು** ಹೆಚ್ಚಿನ ಹಣವನ್ನು ಖರ್ಚು ಮಾಡುವ ಒಂದು ಹೊಸ ವಿಧಾನವಾಗುತ್ತದೆ. ಅಷ್ಟೆ

## ಕಾಲ್ಚೆಂಡಾಟದ ಜಾಗತಿಕ ಚಮತ್ಕಾರ

"ನನ್ನ ತರುಣ ಸ್ನೇಹಿತರೆ, ಮೊದಲು ಬಲಿಷ್ಠರಾಗಿ. ಇದು ನನ್ನ ಬುದ್ಧಿವಾದ. ಗೀತೆಯ ಅಧ್ಯಯನಕ್ಕಿಂತ ಫುಟ್‌ಬಾಲ್ ಆಟ ನಿಮ್ಮನ್ನು ಮುಕ್ತಿಯ ಹತ್ತಿರಕ್ಕೆ ಕೊಂಡೊಯ್ಯುತ್ತದೆ ಇವು ಕೆಚ್ಚಿನ ಮಾತುಗಳು. ಆದರೂ ನಾನು ಇದನ್ನು ನಿಮಗೆ ಹೇಳಬೇಕಾಗಿದೆ. ನಾನು ನಿಮ್ಮನ್ನು ಪ್ರೀತಿಸುತ್ತೇನೆ. ನಿಮ್ಮ ಕೊರತೆಗಳು ನನಗೆ ಗೊತ್ತಿವೆ. ನನಗೆ ಸ್ವಲ್ಪ ಅನುಭವವಾಗಿದೆ. ನಿಮ್ಮ ಬಾಹು ಗಳ ಮಾಂಸಖಂಡದಲ್ಲಿ ಸ್ವಲ್ಪ ಹೆಚ್ಚು ಶಕ್ತಿ ಇದ್ದರೆ, ನೀವು ಗೀತೆಯನ್ನು ಇನ್ನೂ ಚೆನ್ನಾಗಿ ತಿಳಿದುಕೊಳ್ಳಬಲ್ಲಿರಿ." – ಇದು ಸ್ವಾಮಿ ವಿವೇಕಾನಂದರು ನಮ್ಮ ಯುವಜನತೆಗೆ ನೀಡಿದ ಕರೆ.

ಫುಟ್‌ಬಾಲ್ ಆಟದಲ್ಲಿ ಕಾಣಬರುವ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯಗಳ ಅದ್ಭುತ ಪ್ರದರ್ಶನ ನಮ್ಮ ಯುವಕರಿಗೆ ಅವುಗಳನ್ನು ತಾವೂ ಬೆಳೆಸಿಕೊಳ್ಳುವಂತೆ ಪ್ರೇರಣೆ ನೀಡುತ್ತದೆ. ಅತ್ಯಂತ ಕಠಿಣ ಪರಿಸ್ಥಿತಿಗಳನ್ನೂ ಆಟಗಾರರು ಧೈರ್ಯಗೆಡದೆ ಎದುರಿಸುವ ದೃಶ್ಯಗಳು ಜೀವನದಲ್ಲೂ ಎಲ್ಲ ಬಗೆಯ ಸಂಕಷ್ಟಗಳನ್ನು ಸಹಿಸಿ ಎದುರಿಸಲು ನಮಗೆ ಧೈರ್ಯ ತುಂಬುತ್ತವೆ. ಸೋಲು–ಗೆಲುವುಗಳ ಅನಿವಾರ್ಯತೆಯನ್ನು ಈ ಪಂದ್ಯಗಳು ತಿಳಿಸಿಕೊಟ್ಟು ಸಾಕ್ಷೀಭಾವದ ಆವಶ್ಯಕತೆಯನ್ನು ಎತ್ತಿಹಿಡಿಯುತ್ತವೆ.

ಇತ್ತೀಚಿಗೆ ನಡೆದ ವಿಶ್ವ ಕಪ್ ಫುಟ್‌ಬಾಲ್ ಪಂದ್ಯಾವಳಿಗಳಲ್ಲಿ ಪ್ರಚಂಡ ದೈಹಿಕ, ಮಾನಸಿಕ ಶಕ್ತಿಗಳ ಸೆಣಸಾಟವನ್ನು ನಾವು ಕಂಡೆವು. ಪ್ರತಿಯೊಂದು ಪಂದ್ಯವೂ, ಆಡುತ್ತಿದ್ದ ದೇಶಗಳಿಗೆ ಪ್ರತಿಷ್ಠೆಯ ವಿಷಯವಾಯಿತು. ಗೆಲುವಿನ ಉತ್ಸಾಹ, ಸೋಲಿನ ಅವಮಾನ – ಈ ಎರಡೂ ತಮ್ಮ ಪರಾಕಾಷ್ಠೆಯನ್ನು ಮೆರೆದವು. ಸಣ್ಣ ದೇಶಗಳ ತಂಡಗಳು ದೊಡ್ಡ ದೇಶಗಳನ್ನು, ಬಡ ದೇಶಗಳು ಶ್ರೀಮಂತ ದೇಶಗಳನ್ನು ಸೋಲಿಸಿದವು. ಛಾಂಪಿಯನ್‌ಗಳು ಎಂದು ಮೆರೆದಾಡುತ್ತ ಬಂದಿದ್ದ ದೇಶಗಳು ಸೋಲಿನ ಕಹಿಗುಳಿಗೆಯನ್ನು ನುಂಗಿ ತೆಪ್ಪಗಾದರೆ, ಆಂತರಿಕ ತೊಂದರೆಗಳಿಂದ ಶಕ್ತಿಗುಂದಿವೆ ಎಂದೆಣಿಸಲಾದ ಫ್ರಾನ್ಸ್ ಮತ್ತು ಇಟಲಿ ದೇಶಗಳ ತಂಡಗಳು ಬಲಿಷ್ಠರನ್ನೆಲ್ಲ ಬಗ್ಗುಬಡಿದು ಫೈನಲ್ ತಲುಪಿದವು. ಇಟಲಿ ದೇಶ ಜಯಗಳಿಸಿತು. ಅಭಿಮಾನಿಗಳೂ ಅಷ್ಟೆ. ತಮ್ಮ ತಂಡ ಗೆದ್ದಾಗ ಇಡೀ ದೇಶದಲ್ಲಿ ವಿಜಯೋತ್ಸವದ ಸಂಭ್ರಮವಾದರೆ, ಮುಂದಿನ ಪಂದ್ಯದಲ್ಲಿ ಸೋತಾಗ ಅದೇ ದೇಶದಲ್ಲಿ ಎಲ್ಲೆಡೆಯೂ ಸೂತಕದ ಕಳೆ.

ಹೀಗೆ ಜಾಗತಿಕ ರಂಗದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಈ ಕಾಲ್ಚೆಂಡಾಟ ಪ್ರಭಾವ ಬೀರಿರುವುದು ಅದ್ಭುತವೇ ಸರಿ. ಅದಕ್ಕೆ ಕಾರಣವೂ ಇಲ್ಲದಿಲ್ಲ. ಇಲ್ಲಿ ನಾವು ಮಾನವಸಹಜ ಭಾವನೆಗಳಿಗೆ ಒಂದು ಬಗೆಯ ಅನಿಯಂತ್ರಿತ ಅಭಿವ್ಯಕ್ತಿಯನ್ನು ಕಾಣುತ್ತೇವೆ. ದ್ವೇಷ, ಸಂದೇಹ, ಅಸೂಯೆ, ಕ್ರೋಧ, ಭಾವಾವೇಶ, ಉನ್ಮಾದ – ಇವೆಲ್ಲ ವ್ಯಕ್ತಿಗಳು ಮತ್ತು ದೇಶಗಳ ನಡುವೆ ಕಲಹ ಮತ್ತು ಯುದ್ಧಗಳನ್ನು ತರಬಲ್ಲವು. ಈ ಭಾವನೆಗಳೆಲ್ಲ ಆಟದ ಮೈದಾನದಲ್ಲಿ ಹರಿದಾಡಿಬಿಟ್ಟರೆ ಅಷ್ಟರ ಮಟ್ಟಿಗೆ ಜಾಗತಿಕ ಶಾಂತಿಗೆ ಸಹಾಯಕ, ಅಲ್ಲವೇ? ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳು ವಿವಿಧ ದೇಶಗಳ ಜನರ ಮಧ್ಯೆ ಅಗಾಧವಾದ ಕಂದರಗಳನ್ನು ನಿರ್ಮಾಣ ಮಾಡಿವೆ. ಆದರೆ ಇಲ್ಲಿ ಅವರು ಅವನ್ನೆಲ್ಲ ಸ್ವಲ್ಪ ಕಾಲವಾದರೂ ಮರೆತು, ಪರಸ್ಪರರನ್ನು ಅರಿತುಕೊಳ್ಳುವ ಪ್ರಯತ್ನ ಮಾಡುತ್ತಾರೆ. ಆದರೆ ಇದು ಕೇವಲ ತಾತ್ಕಾಲಿಕ. **ಜನರ ಮನಸ್ಸುಗಳು ಶಾಶ್ವತವಾಗಿ ಪರಿವರ್ತನೆ ಹೊಂದಿದಾಗ ಮಾತ್ರ ಶಾಶ್ವತ ಜಾಗತಿಕ ಭಾವೈಕ್ಯ ಸಾಧ್ಯವಾಗುತ್ತದೆ. ಅಂತಹ ಪರಿವರ್ತನೆ ಕೇವಲ ನೈತಿಕತೆ ಮತ್ತು ಆಧ್ಯಾತ್ಮಿಕತೆಗಳಿಂದ ಮಾತ್ರ ಸಾಧ್ಯ ಅಲ್ಲವೆ?**